# ಫೇಶಿಯಲ್ ನಂತರ ಮುಂದೇನು..?

★ ಹರೀಶ್‌ಕುಮಾರ್



ಫೇಶಿಯಲ್ ಸೌಂದರ್ಯಪ್ರಿಯರಿಗೆ ಅಗತ್ಯ ಮತ್ತು ಪ್ರಿಯವಾದ ಸಾಧನ. ಫೇಶಿಯಲ್‌ಗೆ ಮೊರೆ ಹೋಗುವ ಮಹಿಳೆಯರು ಹರ್ಬಲ್ ಫೇಶಿಯಲ್ ಬಳಸುವುದು ಸುರಕ್ಷತೆ ದೃಷ್ಟಿಯಿಂದ ಒಳಿತು.

ಸೌಂದರ್ಯ ವೃದ್ಧಿಸಲು, ಮುಖದ ಅಂದ ಹೆಚ್ಚಿಸಲು ಮಹಿಳೆಯರು ಫೇಶಿಯಲ್‌ನ ಮೊರೆ ಹೋಗುವುದು ಸಹಜ. ತ್ವಚೆಯ ಹೊಳಪಿಗೆ, ನಯಕ್ಕೆ, ಕಾಂತಿಯುತವಾಗಿ ಕಂಗೊಳಿಸಲು ಸೌಂದರ್ಯಪ್ರಿಯರಿಗೆ ಫೇಶಿಯಲ್ ಒಂದು ಮುಖ್ಯ ಸಾಧನ.

ಹಾಗಾದರೆ ನೀವೆಲ್ಲಾ ಫೇಶಿಯಲ್ ಮಾಡಿಸುತ್ತಿರುತ್ತೀರಿ ತಾನೆ? ಪ್ರತೀ ತಿಂಗಳಿಗೊಮ್ಮೆ ಮಾಡಿಸ್ತೀರಾ ಅಥವಾ ಎರಡು ಮೂರು ತಿಂಗಳಿಗೊಮ್ಮೆ ಮಾಡಿಸ್ತೀರಾ? ನಿಮ್ಮ ನಿಮ್ಮ ಅನುಕೂಲಕ್ಕೆ ತಕ್ಕಂತೆ ತಿಂಗಳಿಗೋ, ಎರಡು ತಿಂಗಳಿಗೋ ಅಥವಾ ಮೂರು ತಿಂಗಳಿಗೋ ಒಮ್ಮೆ ಫೇಶಿಯಲ್ ಮಾಡಿಸ್ತೀರಾ ಅಲ್ವಿ. ಆದರೆ ಅದನ್ನು ಮಾಡಿಸಿದ ನಂತರ ನೀವು ಕಡ್ಡಾಯವಾಗಿ ಗಮನಿಸಿ ಅನುಸರಿಸಬೇಕಾದ ಕೆಲವು ಅಂಶಗಳಿವೆ.

ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಫೇಶಿಯಲ್ ಮಾಡಿಸುತ್ತಿರಿ. ಇದು ತ್ವಚೆಯ ನಿರ್ಜೀವ ಕಣಗಳನ್ನು ಹೋಗಲಾಡಿಸಿ ಕಾಂತಿಯನ್ನು ಹೊಂದಲು ಸಹಾಯಕವಾಗುವುದು. ಮುಖದಲ್ಲಿ ಕಲೆ ಹಾಗೂ ಇನ್ನಿತರೆ ಬ್ಲ್ಯಾಕ್ ಹೆಡ್ ನಂತಹ ಸಮಸ್ಯೆ ಹೊಂದಿರುವವರು ಪ್ರತೀ ತಿಂಗಳೂ ಫೇಶಿಯಲ್ ಮಾಡಿಸಿಕೊಳ್ಳುವುದು ಒಳಿತು.



ಕೇವಲ ಫೇಶಿಯಲ್ ಮಾಡಿಸಿಕೊಳ್ಳುವುದಷ್ಟೇ ಅಲ್ಲ, ಫೇಶಿಯಲ್ ಮಾಡಿಸುವಾಗ ಅನೇಕ ಅಂಶಗಳನ್ನು ಗಮನಿಸಬೇಕು. ಫೇಶಿಯಲ್‌ಗಾಗಿ ಅವರು ಬಳಸಬಹುದಾದ ತರಹೇವಾರಿ ರಾಸಾಯನಿಕ ವಸ್ತುಗಳ ಬಗ್ಗೆ ತಿಳಿದಿರುವುದು ಒಳಿತು. ಇಲ್ಲವಾದಲ್ಲಿ ಕಳಪೆ ದರ್ಜೆ ರಾಸಾಯನಿಕಗಳನ್ನು ಬಳಸಿ ನಿಮ್ಮ ಅಂದವನ್ನು ಹಾಳು ಮಾಡುವುದಲ್ಲದೆ ಮುಂದೆಂದೂ ಸರಿಪಡಿಸಲಾರದಷ್ಟು ರೀತಿಯಲ್ಲಿ ತ್ವಚೆಯು ಹಾಳಾಗುವುದರಲ್ಲಿ ಅನುಮಾನವಿಲ್ಲ. ಅದಕ್ಕೋಸ್ಕರ ಹರ್ಬಲ್ ಫೇಶಿಯಲ್ ಮಾಡಿಸಿಕೊಳ್ಳುವುದು ಸುರಕ್ಷಿತ.

ಫೇಶಿಯಲ್ ಮಾಡಿಸಿದ ನಂತರವೂ ನಾವು ನಮ್ಮ ತ್ವಚೆಯ ರಕ್ಷಣೆಗಾಗಿ ಶ್ರಮ ಪಡಬೇಕು.

- ಫೇಶಿಯಲ್ ಮಾಡಿಸಿದ ನಂತರ ಅದರ ಸಂಪೂರ್ಣ ಅಳವಡಿಕೆಗಾಗಿ ಎರಡು ದಿನ ಬಿಸಿಲಿಗೆ ತ್ವಚೆಯನ್ನು ಒಡ್ಡಬಾರದು.
- ಫೇಶಿಯಲ್ ಮಾಡಿಸಿದ ಬಳಿಕ ಕನಿಷ್ಠ 24 ಗಂಟೆಗಳವರೆಗಾದರೂ ಮುಖಕ್ಕೆ ಯಾವುದೇ ಸೋಪು ಅಥವಾ ಫೇಸ್ ವಾಷ್ ಗಳನ್ನು ಮುಖಕ್ಕೆ ಲೇಪಿಸಬೇಡಿ
- ಮುಖವನ್ನು ತೊಳೆಯುವಾಗ ಉಗುರು ಬೆಚ್ಚಗಿನ ಬಿಸಿ ನೀರನ್ನೇ ಬಳಸಿರಿ ಅಥವಾ ಸಾಧಾರಣ ತಣ್ಣೀರನ್ನು ಬಳಸಿರಿ ಮತ್ತು ಯಾವುದೇ ಕಾರಣಕ್ಕೂ ಬಿಸಿಯಾದ ನೀರನ್ನು ಮುಖಕ್ಕೆ ಹಾಕಬೇಡಿ.
- ಮುಖದ ಕಾಂತಿಯನ್ನು ದ್ವಿಗುಣಗೊಳಿಸಿಕೊಳ್ಳಲು ಹೆಚ್ಚು ಹೆಚ್ಚು ನೀರನ್ನು ಕುಡಿಯಿರಿ. ಎಳನೀರು, ಜ್ಯೂಸ್ ಬಳಸುತ್ತಿರಿ.
- ಕನಿಷ್ಠ 24 ಗಂಟೆಗಳವರೆಗೆ ಮುಖಕ್ಕೆ ಯಾವುದೇ ಕ್ರೀಮ್, ಕಾಸ್ಮೆಟಿಕ್ಸ್‌ಗಳ ಬಳಕೆ ಮಾಡದಿರುವುದು ಉತ್ತಮ.
- ಫೇಶಿಯಲ್ ಮಾಡಿಸಿದ ನಂತರ ಆಗಿಂದಾಗ್ಗೆ ಮುಖವನ್ನು ತಣ್ಣೀರಿನಿಂದ ತೊಳೆಯುತ್ತಿರಿ. ಇದರಿಂದ ತ್ವಚೆಯು ತೇವವಾಗಿದ್ದು, ಮೆದುವಾಗು ವುದಲ್ಲದೆ ಕಾಂತಿಯನ್ನೂ ಹೊಂದಬಲ್ಲದು.

ಈ ರೀತಿ ಕೆಲವು ಸರಳ ಸಲಹೆಗಳನ್ನು ಫೇಶಿಯಲ್ ನಂತರದ ಎರಡು ಮೂರು ದಿನಗಳವರೆಗೆ ಪಾಲಿಸಿದಲ್ಲಿ ಫೇಶಿಯಲ್ ನ ಪರಿಣಾಮವು ತ್ವಚೆಯಲ್ಲಿ ಕಾಣುವುದು ಮತ್ತು ನೀವೂ ಸುಂದರವಾಗಿ ಕಾಣಬಲ್ಲಿರಿ. ■